| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 48/2023

ಫ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ವಿರುಪಾಕ್ಷ |
| ತಂದೆಯ ಹೆಸರು | : | ಶಿವರಾಜಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಹನಿ ನೀರಾವರಿ ಏಜೆನ್ಸಿ |
| ವಾಸ | : | ಕಲಬುರಗಿ |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 21-11-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು 2005-06 ರಿಂದ ಇಲ್ಲಿಯ ವರೆಗೆ ಗಂಗಾ ಅಗ್ರಿ ಇಕ್ಯೂಪಮೆಂಟ್ಸ ಫರ್ಮ ಹೆಸರಿನಲ್ಲಿ ಹನಿ ನೀರಾವರಿ ಏಜೆನ್ಸಿ ಯನ್ನು ರೈತರ ಕೃಷಿ ಉದ್ದೇಶಕ್ಕೆ ನಡೆಸುತ್ತಿದ್ದನೆ. ರೈತರು ತಮ್ಮ ಹೊಲಗಳಲ್ಲಿ ಹನಿ ಮತ್ತು ತುಂತುರು ಯಂತ್ರಗಳನ್ನು ಅಳವಡಿಸಲು ಕೋರಿದಾಗ ಅವುಗಳನ್ನು ತರಿಸಿಕೊಂಡು ಹೊಲಗಳಲ್ಲಿ ಅಳವಡಿಸಿರುತ್ತೆನೆ.

2. ಕವಲೂರು ಗ್ರಾಮದ ಸರ್ವೆ ನಂ 542/3 ರ ಶಿವರೆಡ್ಡಿ ಇವರ 4 ಎಕ್ಕರೆ 20 ಗುಂಟೆ ಹೊಲದಲ್ಲಿ ಹನಿ ನೀರಾವರಿ ಅಳವಡಿಸಲು ಮತ್ತು ಸರಕಾರದಿಂದ 90 ಶೇಕಡಾ ಸಹಾಯ ಧನದೊಂದಿಗೆ ಎವರ ಗ್ರಿನ್ ಇರಿಗೆಷನ ಕಂಪನಿ ಬೆಂಗಳೂರು ರವರಿಂದ ಅದಕ್ಕೆ ಸಂಬಂದಿಸಿದಂತೆ ಮಾಹಿತಿ ಪಡೆದಿದ್ದು ಅದರಂತೆ ರೂ 172132 ಕೊಟೆಷನ ತಯಾರಿಸಿ ಶಿವರೆಡ್ಡಿ ಯವರ ಹೆಸರಿನಲ್ಲಿ ಸಹಾಯಕ ತೊಟಗಾರಿಕೆ ನಿರ್ದೇಶಕರು ಯಾದಗಿರಿ ರವರಿಗೆ 2019-20 ನೇ ಸಾಲಿನಲ್ಲಿ ದಿಃ 11-10-2019 ರಂದು ಸಲ್ಲಿಸಿರುತ್ತೆನೆ.

3. ನಂತರ ಉಪನಿರ್ದೇಶಕರು ಆನಲೈನ ನಲ್ಲ ಕೆಲಸ ಮಾಡಲು ಕಾರ್ಯಾದೇಶ ಮಾಡಿರುತ್ತಾರೆ. ಅದರಂತೆ ಶಿವರೆಡಿ ರವರ ಹೊಲದಲ್ಲಿ ಹನಿ ನಿರಾವರಿ ಹಾಕಿರುತ್ತೆನೆ. ನಂತರ ಸಹಾಯಕ ತೊಟಗಾರಿಕಾ ಅಧಿಕಾರಿಗಳ ಸಮಕ್ಷಮ ಸ್ಥಳ ಪರಿಶೀಲನೆ ಮತು್ತ ನೀರಿಕ್ಷಣೆಯನ್ನು ದಿಃ 27- 02-2020 ರಂದು ಸದರಿಯವರ ಹೊಲದಲ್್ ಜಿ ಪಿಎಸ್ ಮೂಲಕ ಮಾಡಲಾಗಿರುತ್ತದೆ. ನಂತರ ಸಹಾಯಕ ತೊಟಗಾರಿಕಾ ಉಪ ನಿರ್ದೇಶಕು ಶೇ 90 ರಷ್ಟು

ಸಬಸಿಡಿ ಹಣ ಮಂಜೂರು ಮಾಡಲು ಉಪ ನಿರ್ದೇಶಕರು ತೋಟಗಾರಿಕಾ ಇಲಾಖೆ ಮಿನಿ ವಿಧಾನ ಸೌದ ಯಾದಗಿರಿ ರವರಿಗೆ ದಾಖಲೆಗಳನ್ನು ಖಳುಹಿಸಿಕೊಟ್ಟಿರುತ್ತಾರೆ.

4. 2019-20 ಮಾರ್ಚ ನಲ್ಲಿ ಸಬಸಿಡಿ ಹಣ ಮಂಜೂರಾಗಬೆಕಿದ್ದು ಲಂಚದ ಹಣದ ಕಾರಣವಾಗಿ ಉಪ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಮಲ್ಲಿಕಾರ್ಜು ಬಾಬು ರವರು ಸಬಸಿಡಿ ಹಣ ಮಂಜೂರು ಮಾಡಿರಲಿಲ್ಲ. ನಂತರ ಶಿವರೆಡ್ಡಿ ರವರು ನನ್ನ ಬಳಿ ಬಂದು ಎಸಿಬಿ ಪೊಲಿಸರಿಗೆ ತಿಳಿಸಿದರೆ ಸಬ್ ಸಿಡಿ ಹಣಪಾವತಿ ಯಾಗುತ್ತದೆಂದು ಆಕಾರಣಕ್ಕೆ ನಾನು ಎ ಸಿ ಬಿ ಪೊಲಿಸ ಠಾಣೆಗೆ ಹೊದೆ. ಶಿವರೆಡ್ಡಿ ಹನಿ ನೀರಾವರಿ ನೀವೆ ಮಾಡಿಸಿದ್ದು ಸಬ್ ಸಿಡಿ ಹಣ ನೀವೆ ಕೊಡಿಸಿ ಎಂದು ಹೇಳಿದ್ದರು. ಆ ಕಾರಣಕ್ಕೆ ನಾನು ಆರೊಪಿ ಉಪ ನಿರ್ದೇಶಕರ ಕಛೇರಿಗೆ ಸಪ್ಟೆಂಬರ ತಿಂಗಳ ಎರಡನೆ ವಾರ ಅವರಿಗೆ ಬೇಟಿ ಯಾಗಿ ಕೆಳಿದಾಗ ಮಾಡಿಕೊಡುತ್ತೆವೆ ಹೊಾಗಿ ಎಂದು ಹೇಳಿದರು. ಆದರೆ ಅವರು ಮಂಜೂರು ಮಾಡಲಿಲ್ಲ. ನಾನು ನನ್ನ ಮೊವೈಲ ಸಂಃ 7019453190 ಇಂದ ಆರೊಪಿ ಮಲ್ಲಿಕಾರ್ಜುನ ಬಾಬು ಮೊಬೈಲ ಸಂಃ 9480461234 ಗೆ ಕರೆ ಮಾಡಿ ಮಾತನಾಡಿದ್ದು ಅವರು ರೂ.5000/- ಕೊಡುವಂತೆ ಕೆಳಿರುತ್ತಾರೆ. ನಾನು 3-4 ದಿನ ಬಿಟ್ಟು ಕಳುಹಿಸುತ್ತೆನೆಂದು ನನಗೆ ಲಂಚದ ಹಣ ಕೊಡಲು ಇಷ್ಟವಾಗದ ಕಾರಣ ನಾನು ಎ ಸಿ ಬಿ ಪೊಲಿಸ ಠಾಣೆಗೆ ಹೊಗಿ ದಿಃ 30-09-2020 ರಂದು ಆರೊಪಿತರ ಮೆಲೆ ದೂರು ನೀಡಿರುತ್ತೆನೆ. ಸಾಕ್ಷಿಗೆ ಕಡತದಲ್ಲಿನ ದೂರು ತೋರಿಸಲಾಗಿ ಅದರಲ್ಲಿರುವಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

5. ನಂತರ ನನ್ನ ದೂರನ್ನು ಎ ಸಿ ಬಿ ಪೊಲಿಸರು ದಾಖಲಿಸಿ ಕೊಂಡಿರುತ್ತಾರೆ. ನಾನು ನಿಪಿ 1 ದೂರಿನೊಂದಿಗೆ 5 ದಾಖಲೆಗಳನ್ನು ಲಗತ್ತಿಸಿ ಕೊಟ್ಟಿರುತ್ತೆನೆ. ಸಾಕ್ಷಿಗೆ ಕಡತದಲ್ಲಿನ ಎರಡು ಸ್ವಿಕೃತಿ, ಒಂದು ಇನವಾಯ್ಸು, ಒಂದು ಅರ್ಜಿ, ಒಂದು ಪಹಣಿ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 2 ರಿಂದ 6 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ), 3(ಎ), 4(ಎ), 5(ಎ), 6(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 2 ಭಾವಚಿತ್ರಗಳನ್ನು ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಅವುಗಳನ್ನು ನಿ.ಪಿ.7 ಮತ್ತು 8 ಎಂದು ಗುರುತಿಸಲಾಯಿತು.

6. ಎಸಿಬಿ ಪೊಲಿಸರು ದೂರು ನೀಡಿದ ನಂತರ ಪ್ರ ವಾ ವ ವನ್ನು ದಾಖಲಿಸಿ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿಗೆ ಕಡತದಲ್ಲಿನ ಪ್ರ ವಾ ವ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.9 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು.

7. ನಂತರ ಎಸಿಬಿ ಪೊಲಿಸರು ಚಾಸಾಃ 2 ಮತ್ತು 3 ರವರುನ್ನು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಛೇರಿಯಿಂದ ಪಂಚರಾಗಿ ಎಸಿಬಿ ಕಛೇರಿಗೆ ಕರೆಸಿದರು. ನಂತರ

ಅವರನ್ನು ನನಗೆ ಮತ್ತು ನನ್ನನ್ನು ಅವರಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು. ಅವರಿಗೆ ನಾನು ದೂರು ಕೊಟ್ಟ ಬಗ್ಗೆ ವಿವರವಾಗಿನ ದೂರನ್ನು ಓದಿ ತಿಳಿಸಿರುತ್ತಾರೆ. ಪಂಚರು ಏನೂ ಹೇಳಿದರು ಎಂದು ನನಗೆ ನೆನಪಿಲ್ಲ. ನಂತರ ಪೊಲಿಸರು ಫಿನಾಪ್ತಲಿನ ಪುಡಿ ಮತ್ತು ಸೊಡಿಯಂ ಕಾರ್ಬೊನೆಟ ತರೆಸಿರುತ್ತಾರೆ. ನಂತರ ಸೊಡಿಯಂ ಕಾರ್ಬೊನೆಟನ್ನು ಒಂದು ಗಾಜಿನ ಬೌಲ ನಲ್ಲಿನ ನೀರಿಗೆ ಹಾಕಿ ಅದು ತಿಳಿ ಬಣ್ಣದಲ್ಲಿ ಇತ್ತು. ನಂತರ ನಾನು ಪಿ ಎಸ್ ಐ ರವರಿಗೆ ನೀಡಿದ ರೂ **500** ಮುಖ ಬೆಲೆಯ **10** ನೊಟುಗಳನ್ನು ಲಂಚದ ಹಣ ವೆಂದು ನೀಡಿದ್ದು ಅವರು ಚಾಸಾಃ **2** ರವರಿಗೆ ನೀಡಿ ಫಿನಾಪ್ತಲಿನ ಪುಡಿಯನ್ನು ಸದರಿ ನೊಟುಗಳಿಗೆ ಹಚ್ಚಲು ಹೇಳಿದ್ದು , ಅವರು ನೊಟು ಏಣಿಸಿ ಚಾಸಾಃ **3** ರವರು ಸದರಿ ನೊಟುಗಳ ಸಂಖ್ಯೆ ಯನ್ನು ಬೆರಳಚ್ಚು ಗಾರನಿಗೆ ಹೇಳಿದ್ದು ಅವುಗಳನ್ನು ಬೆರಳಚ್ಚು ಮಾಡಿರುತ್ತಾರೆ. ಸದರಿ ನೊಟುಗಳನ್ನು ನೊಡಿದರೆ ಗುರುತಿಸುತ್ತೆನೆ. ಒಂದು ಲಕೊಟೆಯಲ್ಲಿ ಪ್ಯಾಕ್ ಮಾಡಿ ಸಿಲ್ ಮಾಡಲಾದ ಕವರನ್ನು ನ್ಯಾಯಲಯದ ಅನುಮತಿಯ ಮೆರೆಗೆ ತೆರೆದು ಸಾಕ್ಷಿಗೆ ತೊರಿಸಿದ್ದು, ಅದರಲ್ಲಿರುವ ರೂ.500 ಮುಖಬೆಲೆಯ 10 ನೊಟುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಬೆರಳಚ್ಚು ಮಾಡಿದ ಸಂಖ್ಯೆಯ ದಾಖಲೆಯನ್ನು ನೊಡಿದರೆ ಗುರುತಿಸುತ್ತೆನೆ . ಸಾಕ್ಷಿಗೆ ಕಡತದಲ್ಲಿನ ನೊಟುಗಳ ಸಂಖ್ಯೆಯ ಬೆರಳಚ್ಚು ಮಾಡಿದ ದಾಖಲೆ ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.10 ಎಂದು ಗುರುತಿಸಲಾಯಿತು.

**8.** ನಂತರ ಚಾಸಾಃ 3 ರವರು ಹಣ ಏಣಿಕೆ ಮಾಡಿದ ನಂತರ ಅಲ್ಲೆ ಇದ್ದ ಪಿಸಿ ಕೈಗೆ ಪಿ ಎಸ್ ಐ ರವರ ಸೂಚನೆಯಂತೆ ನೀಡಿರುತ್ತಾರೆ. ನಂತರ ಪಿಸಿ ರವರು ಫಿನಾಪ್ತಲಿನ ಪುಡಿಯನ್ನು ನೊಟುಗಳಿಗೆ ಸವರಿರುತ್ತಾರೆ.

( ಸಾಕ್ಷಿ ನನಗೆ ನೆನಪಿರುವಷ್ಟು ಮಾತ್ರ ಹೆಳುತ್ತೆನೆಂದು ಹೆಳಿದ್ದು ಮುಂದುವರಿದ ಮುಖ್ಯವಿಚರಣೆಗೆ ಕಾಲಾವಕಾಶ ಕೊರಿದ್ದು ಅನೂಮತಿಸಿ ಮುಂದೂಡಲಾಯಿತು)

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

**ಫ್ರಾಸಾ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕಃ 12-02-2026 ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

9. ನಂತರ ತನಿಖಾಧಿಕಾರಿಯವರು ಅಮರನಾಥ ಸಿಪಿಸಿ ರವರಿಗೆ ಲಂಚದ ಹಣದ ನೋಟುಗಳಿಗೆ ಎರಡು ಬದಿಗೆ ತೆಳುವಾಗಿ ಪಿನಾಫ್ತಲೀನ್ ಪೌಡರನ್ನು ಸವರಿ ಪಂಚ ಸಾಕ್ಷಿ ಶ್ರೀ ಸಂತೋಷಕುಮಾರ ಇವರ ಕೈಯಲ್ಲಿ ಕೊಡಲು ತಿಳಿಸಿದಂತೆ ಅಮರನಾಥ ಸಿಪಿಸಿ ರವರು ನಾನು ಹಾಜರ ಪಡಿಸಿದ್ದ ಲಂಚದ ಹಣಕ್ಕೆ ಪಿನಾಫ್ತಲೀಸ್ ಪೌಡರನ್ನು ಸವರಿ ಪಂಚ ಸಾಕ್ಷಿ ಶ್ರೀ ಸಂತೋಷಕುಮಾರ ಇವರು ಕೈಗೆ ಕೊಟ್ಟರು. ನಂತರ ತಮ್ಮ ಸೂಚನೆಯಂತೆ ಪಂಚ ಸಾಕ್ಷಿ ಸಂತೋಷಕುಮಾರ ಇವರು ನೋಟುಗಳನ್ನು ಎಣಿಸಿ ನನ್ನ ಶರ್ಟಿನ ಮೇಲಿನ ಜೇಬನ್ನು ಶೋಧಿಸಿ ಏನೂ ಇಲ್ಲವೆಂದು ಪರಿಶೀಲಿಸಿ ಜೇಬಿನಲ್ಲಿ 5,000/- ರೂಪಾಯಿಯನ್ನು ಹಣವನ್ನು ಇಟ್ಟರು.

10. ನಂತರ ಶ್ರೀ ಸಾಬಣ್ಣ ಆರ್.ಹೆಚ್.ಸಿ ರವರು ತಯಾರಿಸಿದ ಗಾಜಿನ ಬಟ್ಟಲಿನಲ್ಲಿದ್ದ ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಪಂಚಸಾಕ್ಷಿ ಶ್ರೀ ಸಂತೋಷಕುಮಾರ ಇವರ ಎರಡೂ ಕೈಗಳ ಬೆರಳುಗಳನ್ನು ಅದ್ದಿ ತೊಳೆಯಿಸಲಾಗಿ ಬಣ್ಣ ರಹಿತವಾಗಿದ್ದ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು ಖಾಲಿ ಗಾಜಿನ ಬಾಟಲಿಯಲ್ಲಿ ಹಾಕಿ ಬಾಯಿ ಮುಚ್ಚಿ, ಬಟ್ಟೆ ಸುತ್ತಿ ದಾರದಿಂದ ಕಟ್ಟಿ ಅದರ ಮೇಲೆ "ಎಸ ಎನ್ " ಅಂತಾ ಆರಗಿನಿಂದ ಇಂಗ್ಲೀಷಿನಲ್ಲಿ ಸೀಲ ಮಾಡಿದ. ಚಿಕ್ಕ ಬಿಳಿ ಹಾಳೆಯ ಮೇಲೆ ವಿವರಣೆಯನ್ನು ಬರೆದು ಅದರ ಮೇಲೆ ಪಂಚರು ಹಾಗು ತಾವು ಸಹಿ ಮಾಡಿದ್ದು, ಅದನ್ನು ಬಾಟ್ಲಿಗೆ ಅಂಟಿಸಿ ಅದಕ್ಕೆ ಆರ್ಟಿಕಲ್ ನಂಬರ-3 ಅಂತಾ ಗುರುತಿಸಲಾಯಿತು. ನಂತರ ತಾವು ಪಂಚರಿಗೆ ತಿಳಿಸಿದ್ದೇನೆಂದರೆ, ಆಪಾದಿತ ನೌಕರನು ಪಿರ್ಯಾದಿಯಿಂದ ಲಂಚದ ಹಣ ಪಡೆದುಕೊಂಡಿದ್ದೇ ಆದಲ್ಲಿ, ಇದೇ ರೀತಿ ಅವನ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಅದ್ದಿದಾಗ ಬಣ್ಣ ರಹಿತವಾದ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗುತ್ತದೆ ಅಂತಾ ಮನವರಿಕೆ ಮಾಡಿಕೊಟ್ಟಿದ್ದು ಇರುತ್ತದೆ.

11 ನಂತರ ತನಿಖಾಧಿಕಾರಿಯವರು ಅರ್ಟಿಕಲ್ ನಂ 1 ರಿಂದ 4 ನೆದ್ದವಗಳನ್ನು ಮತ್ತು ಪಿನಾಪ್ತಲಿನ್ ಪುಡಿ ಇರುವ ಡಬ್ಬಿಯನ್ನು ಕಛೇರಿಯ ಕೋಣೆಯಲ್ಲಿಟ್ಟು ಕೀಲಿ ಹಾಕಿದ್ದು, ನಂತರ ನನಗೆ ಆಪಾದಿತನು ಲಂಚದ ಹಣ 5,000/- ರೂಪಾಯಿ ಕೊಡಲು ಕೇಳಿದಾಗ ಮಾತ್ರ ಅವನ ಕೈಗೆ ಕೊಡಲು ತಿಳಿಸಿದ್ದು ಇರುತ್ತದೆ. ಒಂದು ವೇಳೆ ಆರೋಪಿತ ಲಂಚದ ಹಣವೆಂದು ಕೇಳಿ ಬೇರೆಯವರ ಕೈಗೆ ಕೊಡುವಂತೆ ಅಥವಾ ಬೇರೆ ಯಾವದೇ ಸ್ಥಳದಲ್ಲಿ ಇಟ್ಟು ಹೋಗಲು ತಿಳಿಸಿದಾಗ ಮಾತ್ರ ಅವನು ಹೇಳಿದಂತೆ ಹಣವನ್ನು ಕೊಟ್ಟು ನಂತರ, ಹೊರಗಡೆ ಬಂದು ಹಾಕಿಕೊಂಡ ಮಾಸ್ಕನ್ನು ಕೈಯಿಂದ ತೆಗೆದು ಕೈಯಲ್ಲಿ ಹಿಡಿಯುವ ಮೂಲಕ ಸನ್ನೆ ಮಾಡುವಂತೆ

ತಿಳುವಳಿಕೆ ಕೊಟ್ಟರು ಹಾಗೂ ಲಂಚದ ಹಣ ಕೊಡುವ ವೇಳೆ ಮೋಬೈಲ ವೈಸ್ ರಿಕಾರ್ಡರದಲ್ಲಿ ರಿರ್ಕಾಡ್ ಮಾಡಲು ನಾನು ಹಾಜರ ಪಡಿಸಿದ್ದ ಮೆಮರಿ ಕಾರ್ಡನ್ನು ಪುನಃ ಕೊಟ್ಟು, ಸೂಕ್ತ ತಿಳುವಳಿಕೆ ಕೊಟ್ಟಿರುತ್ತಾರೆ.

12. ನಂತರ ನಾನು ಮತ್ತು ನೆರಳು ಸಾಕ್ಷಿಯಾಗಿ ಪಂಚ ಸಾಕ್ಷಿ ಸಂತೋಷಕುಮಾರ ಇವರಿಗೆ ನನ್ನೊಂದಿಗೆ ಇರಲು ತಿಳಿಸಿ, ನಾನು ಆರೋಪಿಗೆ ರೂ 5,000/- ಲಂಚದ ಹಣ ಕೊಡುವಾಗ, ನನ್ನ ಜೊತೆ ಇರುವಂತೆ ಆತನಿಗೆ ಸೂಚಿಸಿರುತ್ತಾರೆ.

13. ನಂತರ ಸದರಿ ಸಮಯದಲ್ಲಿ ಪೋಟೋಗ್ರಾಫಿ ಮಾಡಿರುತ್ತಾರೆ. ಬೆಳಿಗ್ಗೆ 10:15 ಗಂಟೆಯಿಂದ 11:15 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿಗೆ ಕಡತದಲ್ಲಿನ ಹಣ ವಹಿಸಿಕೊಡುವ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.11 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 13 ಭಾವಚಿತ್ರಗಳನ್ನು ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಸದರಿ ಭಾವಚಿತ್ರಗಳನ್ನು ಹಣ ವಹಿಸಿಕೊಡುವ ಪಂಚನಾಮೆಯ ಕಾಲದಲ್ಲಿ ತೆಗೆದಿದ್ದಾರೆ ಎಂದು ಹೇಳುತ್ತಾರೆ ಅವುಗಳನ್ನು ನಿ.ಪಿ.12 ಮತ್ತು 24 ಎಂದು ಗುರುತಿಸಲಾಯಿತು. ನಿಪಿ 23 ಮತ್ತು 24 ಭಾವಚಿತ್ರಗಳಂತೆ ಚಾಸಾಃ 2 ಮತ್ತು ಪೊಲಿಸರು ಕೊನೆಯಲ್ಲಿ ಕೈತೊಳೆದು ಕೊಂಡಿರುತ್ತೆವೆ. ಆರ್ಟಿಕಲ್ 1 ಒಂದು ಬಾಟಲಿನಲ್ಲಿ ಹಾಕಲಾದ ದ್ರಾವಣ ಬಿಳಿಯ ಬಟ್ಟೆಯಿಂದ ಪ್ಯಾಕ್ ಮಾಡಿ ಸಿಲ್ ಮಾಡಲಾಗಿದ್ದು ಅದನ್ನು ನ್ಯಾಯಲಯದ ಅನುಮತಿಯ ಮೆರೆಗೆ ಸಾಕ್ಷಿಗೆ ತೊರಿಸಿದ್ದು, ಅದನ್ನು ಸೊಡಿಯಂ ಕಾರ್ಬೊನೆಟ ದ್ರಾವಣ ಎಂದು ಸಾಕ್ಷಿ ನೋಡಿ ಗುರುತಿಸಿದ್ದು ಅದರ ಮೆಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ. ಅದನ್ನು ಮು.ಮಾ-2 ಎಂದು ಗುರುತಿಸಲಾಯಿತು.

14. ಆರ್ಟಿಕಲ್ 2 ಒಂದು ಪ್ಯಾಕ್ ಮಾಡಿ ಸಿಲ್ ಮಾಡಲಾದ ಲಕೊಟೆಯನ್ನು ನ್ಯಾಯಲಯದ ಅನುಮತಿಯ ಮೆರೆಗೆ ತೆರೆದು ಸಾಕ್ಷಿಗೆ ತೊರಿಸಿದ್ದು, ಅದರಲ್ಲಿ ಫಿನಾಪ್ತಲಿನ ಪೌಡರ ಇದೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ-3 ಎಂದು ಗುರುತಿಸಲಾಯಿತು. ಅದರ ಮೆಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ.

15. ಆರ್ಟಿಕಲ್ 3 ಒಂದು ಪ್ಯಾಕ್ ಮಾಡಿ ಸಿಲ್ ಮಾಡಲಾದ ಲಕೊಟೆಯನ್ನು ನ್ಯಾಯಲಯದ ಅನುಮತಿಯ ಮೆರೆಗೆ ತೆರೆದು ಸಾಕ್ಷಿಗೆ ತೊರಿಸಿದ್ದು, ಅದರಲ್ಲಿ ಸೊಡಿಯಂ ಕಾರ್ಬೊನೆಟ ಪೌಡರ ಇದೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ-4 ಎಂದು ಗುರುತಿಸಲಾಯಿತು. ಅದರ ಮೆಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ.

16. ಆರ್ಟಿಕಲ್ 4 ಒಂದು ಬಾಟಲಿನಲ್ಲಿ ದ್ರಾವಣ ಬಿಳಿಯ ಬಟ್ಟೆಯಿಂದ ಪ್ಯಾಕ್ ಮಾಡಿ ಸಿಲ್ ಮಾಡಲಾಗಿದ್ದು ಅದನ್ನು ನ್ಯಾಯಲಯದ ಅನುಮತಿಯ ಮೆರೆಗೆ ಸಾಕ್ಷಿಗೆ ತೊರಿಸಿದ್ದು, ಅದನ್ನು

ಗುಲಾಬಿ ಬಣ್ಣದ ಧ್ರಾವಣ ಎಂದು ಸಾಕ್ಷಿ ನೋಡಿ ಗುರುತಿಸಿದ್ದು ಅದರ ಮೇಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ. ಅದನ್ನು ಮು.ಮಾ-5 ಎಂದು ಗುರುತಿಸಲಾಯಿತು. ಅದರ ಮೇಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ.

17. ಎಲ್ಲರೂ ಮಾತನಾಡಿಕೊಂಡು ಮತ್ತೊಮ್ಮೆ ನಮಗೆ ಏನೂ ಮಾಡಬೇಕು ಎಂದು ತಿಳುವಳಿಕೆ ನೀಡಿ ನಾನು ಮತ್ತು ಚಾಸಾಃ 25 ರವರು ನನ್ನ ಜೊತೆ ದ್ವಿಚಕ್ರ ವಾಹನದಲ್ಲಿ ಮತ್ತು ಉಳಿದರು ಜಿಪಿನಲ್ಲಿ ಬೆಃ 11:20 ಗಂಟೆಗೆ ಹೊರಟು, ಯಾದಗಿರಿಯ ಮಿನಿ ವಿಧಾನ ಸೌದಕ್ಕೆ ಹೊದೆವು. ಆಗ ತನಿಖಾಧಿಕಾರಿಯವರು ನನಗೆ ಮತ್ತು ಪಂಚ ನೆರಳು ಸಾಕ್ಷಿ ಸಂತೋಷನಿಗೆ, ಉಪನಿರ್ದೇಶಕರು ತೊಟಗಾರಿಕೆ ಇಲಾಖೆ ಇವರ ಕಛೆರಿಗೆ ಹೊದೆವು.

18. ನಂತರ ಮಲ್ಲಿಕಾರ್ಜುನ ರವರ ಕಛೆರಿಗೆ ಹೊಗಿ ಅವರು ಈಗ ಬಂದಿರಾ ಎಂದು ಕೆಳಿದರು ನಾನು ಊರಿಗೆ ಹೋಗಿದ್ದೆ ಇವತ್ತು ಬಂದಿನಿ ಅಂದೆ.. ಅದಕ್ಕೆ ತಾ ಅಂದಿದ್ದು ನಾನು 5,000/- ರೂ ಇದೆ ಎಂದು ಲಂಚದ ಹಣವನ್ನು ಅವರ ಕೈಗೆ ಕೊಟ್ಟಿದ್ದು ಆಗ 12-20 ಸಮಯ ಆಗಿತ್ತು. ಅವರು ಅದನ್ನು ಸ್ವಿಕರಿಸಿ ಎಣಿಸಿ ತಮ್ಮ ಪ್ಯಾಂಟಿನ ಹಿಂದಿನ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ನಾನು ಹೊರಗಡೆ ಬಂದು ಮಾಸ್ಕ ತೆಗೆಯುವ ಮೂಲಕ ಸಂಜ್ಞೆ ನೀಡಿರುತ್ತೇನೆ, ಆಗ ಸಮಯ 12:25 ಗಂಟೆಯಾಗಿತ್ತು. ಆಗ ಪೊಲಿಸರು ಒಳಗಡೆ ಹೋದರು , ನಂತರ ನನ್ನನ್ನು ಸಜ್ಞೆಮಾಡಿ ಕರೆದಿದ್ದು ಅವರ ಪರಿಚಯವನ್ನು ಆರೊಪಿಗೆ ಮಾಡಿಕೊಂಡಿರತ್ತಾರೆ. ನಾನು ಆರೋಪಿಗೆ ಲಂಚದ ಹಣ ನೀಡಿ ಜೇಬಿನಲ್ಲಿ ಇಟ್ಟು ಕೊಂಡಿರುವುದಾಗಿ ಹೇಳಿದೆ.

( ಮುಂದುವರಿದ ಮುಖ್ಯವಿಚರಣೆಗೆ ಕಾಲಾವಕಾಶ ಕೊರಿದ್ದು ಅನೂಮತಿಸಿ ಮುಂದೂಡಲಾಯಿತು)

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

ನಂತರ ತನಿಕಾಧಿಕಾರಿಯವರು ನನಗೆ ಮತ್ತು ನೆರಳು ಸಾಕ್ಷಿ ಸಂತೋಷಕುಮಾರನಿಗೆ ಏನೇನು ನಡೆಯಿತು ಅಂತಾ ವಿಚಾರಿಸಿದಾಗ, ನಡೆದ ಘಟನೆ ಮೇಲಿನಂತೆ ತಿಳಿಸಿ ಸಂಜ್ಞೆ ನೀಡಿದ್ದರ ಬಗ್ಗೆ ತಿಳಿಸಿದನು ನಂತರ ತನಿಖಾ ತಂಡದವರು ದಾಳಿ ಮಾಡಿದ್ದರ ಬಗ್ಗೆ ತಿಳಿಸಿರುತ್ತಾರೆ. ನಂತರ 'ಆಪಾದಿತನು ಕುಳಿತುಕೊಂಡ ಚೆಂಬರಿನಲ್ಲಿ ತನಿಖಾ ಸಾಮಗ್ರಿಗಳನ್ನು ತರಿಸಿ ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಬಳಸಿದ ನೀರಿನ ಬಾಟಲಿಯನ್ನು ಹೊರ ತೆಗೆಯಿಸಿ ಶ್ರೀ ಮರೆಪ್ಪ ಸಿ.ಹೆಚ್.ಸಿ ರವರಿಂದ ನೀರನ್ನು ಎರಡು 6 ಭಾಜಿನ ವೌಲ ನಲ್ಲಿ ಹಾಕಿಸಿ ಸೋಡಿಯಂ ಕಾರ್ಬೋನೇಟ ದ್ರಾವಣ ತಯಾರಿಸಲು ತಿಳಿಸಿದ ಮೇರೆಗೆ ಅದರಂತೆ, ಮೆರೆಪ್ಪ ಸಿ.ಹೆಚ್.ಸಿ ರವರು ಎರಡು ಪುಡಿಯನ್ನು ಹಾಕಿ ಮಿಶ್ರಣ ಮಾಡಿ ದ್ರಾವಣವನ್ನು ತಯ್ಯಾರಿಸಿದ್ದು, ದ್ರಾವಣವು ಬಣ್ಣ ರಹಿತವಾಗಿದ್ದು ಅದರಲ್ಲಿಯ ಗ್ಲಾಸಿನ್ ಬೌಲನಲ್ಲಿ ನೀರು ಹಾಕಿ ಸೋಡಿಯಂ ಕಾರ್ಬೋನೆಟ್ ಸ್ವಲ್ಪ ಪ್ರಮಾಣದಲ್ಲಿಯ ದ್ರಾವಣವನ್ನು ಸ್ಯಾಂಪಲಗಾಗಿ ಗಾಜಿನ ಬಾಟಲಿನಲ್ಲಿ ಹಾಕಿ ಬಾಯಿ ಮುಚ್ಚಿ ಬಟ್ಟೆ ಸುತ್ತೆ ದಾರದಿಂದ ಕಟ್ಟಿ **"ಖಓ"** ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಅದಕ್ಕೆ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿದ ವಿವರಣೆ ಬರೆದ ಚೀಟಿಯನ್ನು ಅಂಟಿಸಿ ಆರ್ಟಿಕಲ್ ನಂಬರ 5 ಅಂತಾ ಗುರ್ತಿಸಿರುತ್ತಾರೆ.

ನಂತರ ಉಳಿದ ಸೋಡಿಯಂ ಕಾರ್ಬೋನೆಟ್ ದ್ರಾವಣದ ಒಂದು ಬೌಲ ನಲ್ಲಿ ಆಪಾದಿತ ಮಲ್ಲಿಕಾರ್ಯನ ಇವರ ಬಲಗೈ ಬೆರಳುಗಳನ್ನು ಅದ್ದಿ ತೊಳೆಯಿಸಲಾಗಿ, ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ, ಸದರಿ ದ್ರಾವಣವನ್ನು ಎರಡು ಸಮಭಾಗಗಳಾಗಿ ಮಾಡಿ ಎರಡು ಖಾಲಿ ಗಾಜಿನ ಬಾಟಲಿಗಳಲ್ಲಿ ಸಂಗ್ರಹಿಸಿ ಬಾಯ ಮುಚ್ಚಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ **"ಖಓ "**ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಅದಕ್ಕೆ ಪಂಚರು ಮತ್ತು ತಾವು ಸಹಿ ಮಾಡಿದ ವಿವರಣೆ ಬರೆದ ಚೀಟಿಯನ್ನು ಅಂಟಿಸಿ ಆರ್ಟಿಕಲ್ ನಂಬರ 6 ಮತ್ತು 6-2 **ಆಟ ಛಿಜಿಡಿಂಛಿಛಿಚಿಜ.**

ನಂತರ ಇನ್ನೊಂದು ಸೋಡಿಯಂ ಕಾರ್ಬೋನೆಟ್ ದ್ರಾವಣವಿರುವ ಬೌಲನಲ್ಲಿ ಮಲ್ಲಿಕಾರ್ಜುನ ಇವರ ಎಡಗೈ ಬೆರಳುಗಳನ್ನು ಅದ್ದಿ ತೊಳೆಯಿಸಿದ್ದು, ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ಆ ದ್ರಾವಣವನ್ನು ಎರಡು ಸಮವಾಗಗಳಾಗಿ ಮಾಡಿ ಎರಡು ಖಾಲಿ ಗಾಜಿನ ಬಾಟಲಿಗಳಲ್ಲಿ ಸಂಗ್ರಹಿಸಿ ಬಾಯಿ ಮುಚ್ಚಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ **"ಖಓ"** ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಅದಕ್ಕೆ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ

ಮಾಡಿದ ವಿವರಣೆ ಬರೆದ ಚೀಟಿಯನ್ನು ಅಂಟಿಸಿ ಆರ್ಟಿಕಲ್ ನಂಬರ 7 ಮತ್ತು 7-ಎ ಅಂತಾ ಗುರ್ತಿಸಿರುತ್ತಾರೆ.

ನಂತರ ತನಿಖಾಧಿಕಾರಿಯವರು ಅಪಾದಿತ ಮಲ್ಲಿಕಾರ್ಜುನ ಬಾಬು ಇವರ ಹತ್ತಿರ ವಿದ್ದ ತಮ್ಮ ಹಿಂದಿನ ಪ್ಯಾಂಟಿನ ಜೇಬಿನಲ್ಲಿಟ್ಟಿದ್ದ ಲಂಚದ ಹಣವನ್ನು ಹೊರಗಡೆ ತೆಗೆದು ಟೇಬಲ್ ಮೇಲೆ ಇಡಲು ತಿಳಿಸಿದಂತೆ ಅವರು ತೆಗೆದು ಟೇಬಲ್ ಮೇಲೆ ಇಟ್ಟಿರುತ್ತಾರೆ. ಅವುಗಳನ್ನು ಪಂಚ ಸಾಕ್ಷಿ ಹಣಮಂತರಾಯ ಇವರು ಇನ್ನೊಬ್ಬ ಪಂಚ ಸಾಕ್ಷಿಯಾದ ಸಂತೋಷಕುಮಾರ ರವರೊಂದಿಗೆ ತಾಳೆ ಮಾಡಿ ಈ ನೋಟುಗಳು ಎ.ಸಿ.ಬಿ ಪೊಲೀಸ ಠಾಣೆಯಲ್ಲಿ ನನಗೆ ವಹಿಸಿಕೊಟ್ಟ ನೋಟುಗಳೇ ಆಗಿರುತ್ತವೆ ಅಂತಾ ಗುರುತಿಸಿ ಸದರಿ ನೋಟುಗಳು ರೂ 500/-ರೂ ಮುಖ ಬೆಲೆಯ 10 ನೋಟುಗಳು, ಹಾಗೂ ರೂ 5,000/- ಆಗಿದ್ದು ಅವುಗಳನ್ನು ಒಂದು ಕಾಗದದ ಕವರಿನಲ್ಲಿ ಹಾಕಿ, ಬಾಯಿ ಅಂಟಿಸಿ '**ಖಓ**' ಅಂತಾ ಇಂಗ್ಲಿಷಿನಲ್ಲಿ ಮೊಹರು ಮಾಡಿಸಿ, ಒಂದು ಸಣ್ಣ ಹಾಳೆಯಲ್ಲಿ ವಿವರಗಳನ್ನು ಬರೆದು ಅದರಲ್ಲಿ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿ ಅದನ್ನು ಕವರಿಗೆ ಅಂಟಿಸಿ ಆರ್ಟಿಕಲ್ ನಂ-8 ಅಂತಾ ಗುರ್ತಿಸಿರುತ್ತಾರೆ.

ನಂತರ ತನಿಖಾಧಿಕಾರಿಯವರು ಇನ್ನೊಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೆಟ್ ದ್ರಾವಣವನ್ನು ತಯ್ಯಾರಿಸಲು ಮರಪ್ಪ ಸಿಹೆಚ್.ಸಿ ರವರಿಗೆ ತಿಳಿಸಿದಂತೆ ಅವರು ತಯ್ಯಾರಿಸಿದ್ದು ಅದರಲ್ಲಿ ಆಪಾದಿತ ಮಲ್ಲಿಕಾರ್ಜುನ ಇವರು, ಲಂಚದ ಹಣ ಇಟ್ಟುಕೊಂಡಿದ್ದ ಪ್ಯಾಂಟಿನ ಹಿಂದಿನ ಜೇಬನ್ನು ಸೋಡಿಯಂ ದ್ರಾವಣದಲ್ಲಿ ಅದ್ದ ಬೇಕಾಗಿದ್ದರಿಂದ ಮತ್ತೊಂದು ಪ್ಯಾಂಟಿನ ಏರ್ಪಾಡು ಮಾಡಿ ಲಂಚದ ಹಣ ಇಟ್ಟುಕೊಂಡಿದ್ದ ಪ್ಯಾಂಟನ್ನು ಬಿಚ್ಚಿಸಿ ಶ್ರೀ ಮರೆಪ್ಪ ಸಿ.ಹೆಚ್.ಸಿ ಸದರಿ ಪ್ಯಾಂಟಿನ ಹಿಂದಿನ ಜೇಬನ್ನು ಅದ್ದಿ ತೊಳೆಯಿಸಿದರು. ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ಗುಲಾಬಿ ಬಣ್ಣದ ದ್ರಾವಣವನ್ನು ಎರಡು ಸಮಭಾಗಗಳಾಗಿ ಮಾಡಿ ಎರಡು ಖಾಲಿ ಗಾಜಿನ ಬಾಟಲಿಗಳಲ್ಲಿ ಸಂಗ್ರಹಿಸಿ ಬಾಯಿ ಮುಚ್ಚಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ "**ಖಓ**"ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಅದಕ್ಕೆ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ

ಮಾಡಿದ ವಿವರಣೆ ಬರೆದ ಚೀಟಿಯನ್ನು ಅಂಟಿಸಿ ಆರ್ಟಿಕಲ್ ನಂಬರ 9 ಮತ್ತು 9-ಎ ಅಂತಾ ಗುರ್ತಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು, ಪಂಚರ ಸಮಕ್ಷಮದಲ್ಲಿ ಆಪಾದಿತನು ಧರಿಸಿದ ಕಪ್ಪು ಬಣ್ಣದ ಪ್ಯಾಂಟನ್ನು, ಕೇಸಿನ ಮುಂದಿನ ಪುರಾವೆಗಾಗಿ ಜಪ್ತಿ ಪಡಿಸಿಕೊಂಡು ಒಂದು ಕಾಗದದ ಕವರಿನಲ್ಲಿ ಹಾಕಿ ಬಾಯಿ ಮುಚ್ಚಿ "**ಖಓ'**" ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ

ಮೊಹರು ಮಾಡಿಸಿ ಅದಕ್ಕೆ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿದ ವಿವರಣೆ ಬರೆದ ಚೀಟಿಯನ್ನು ಅಂಟಿಸಿ ಅರ್ಟಿಕಲ್ ನಂಬರ 10 ಅಂತಾ ಗುರ್ತಿಸಿದರು.

ನಂತರ ನಾನು ಧ್ವನಿ ಮುದ್ರಿಸಿಕೊಂಡಿದ್ದ ಮೊಬೈಲನಲ್ಲಿದ್ದ ಮಮೆರಿ ಕಾರ್ಡಿನಲ್ಲಿ ಆಪಾದಿತ ಮಲ್ಲಿಕಾರ್ಜುನ ಮತ್ತು ನನ್ನ ನಡುವೆ ನಡೆದ ಸಂಭಾಷಣೆಯನ್ನು ಲ್ಯಾಪಟಾಪಿನಲ್ಲಿ ಹಾಕಿ, ಸಂಭಾಷಣೆಯನ್ನು, ಅದೇ ಕಛೇರಿಯಲ್ಲಿದ್ದ ಶ್ರೀ ದತ್ತಾತ್ರೇಯ ತಂದೆ ಬಾಲಾಜಿ ಪಾಟೀಲ ವಯ:40 ವರ್ಷ ಉ:ಸಹಾಯಕ ನಿರ್ದೇಶಕರು, ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ ಜಿಲ್ಲಾ ಪಂಚಾಯತ, ಯಾದಗಿರಿ ಸಾ:ಹಳ್ಳಿ ಗ್ರಾಮ ತಾ:ಬಸವಕಲ್ಯಾಣ ಜಿ:ಬೀದರ ಹಾ.ವ ರಾಮ ನಿವಾಸ್ ವೆಂಕಟೇಶ್ ನಗರ ಕಲಬುರಗಿ, ರವರಿಗೆ ಕೇಳಿಸಿದರು, ಲಂಚದ ಬೇಡಿಕೆ ಇಟ್ಟ ಧ್ವನಿಯು ಮಲ್ಲಿಕಾರ್ಜುನ ತಂದೆ ಮೈಲಾರಪ್ಪ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ಯಾದಗಿರಿ ಇವರದೇ ಇರುತ್ತದೆಂದು ಗುರ್ತಿಸಿರುತ್ತಾರೆ.

ನಂತರ ನನ್ನ ಮೋಬೈಲ ಮೆಮರಿ ಕಾರ್ಡನಲ್ಲಿ, ರಿಕಾರ್ಡ ಇದ್ದ ಲಂಚದ ಬೇಡಿಕೆಯ ಸಂಬಾಷಣೆಯನ್ನು, ಲ್ಯಾಪ ಟಾಪ ಮುಖಾಂತರ ಎರಡು ಸಿ.ಡಿ ಗಳಿಗೆ ವರ್ಗಾಯಿಸಿ. ಸಿ.ಡಿ ಗಳನ್ನು ಒಂದೊಂದು ಪ್ರತ್ಯೇಕ ಕಾಗದದ ಕವರಿನಲ್ಲಿ ಹಾಕಿ ಅದಕ್ಕೆ ಬಾಯಿ ಅಂಟಿಸಿ "**ಖಓ**"ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಈ ಬಗ್ಗೆ ವಿವರಣೆ ಬರೆದ ಚೀಟಿ ಮೇಲೆ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿ ಕ್ರಮವಾಗಿ ಸಿ.ಡಿಯನ್ನು ಆರ್ಟಿಕಲ್ಲ ನಂ: 11 ಮತ್ತು 11-ಎ ಅಂತಾ ಗುರ್ತಿಸಿದ್ದು ಇರುತ್ತದೆ.

ನಂತರ ನನ್ನ ಮೋಬೈಲದಲ್ಲಿದ್ದ ಮೆಮರಿ ಕಾರ್ಡನ್ನು ಲ್ಯಾಪ ಟಾಪಿಗೆ ಹಚ್ಚಿ ಲಂಚದ ಹಣ ಕೊಡುವಾಗ ರಿಕಾರ್ಡ ಆಗಿರುವ ಸಂಬಾಷಣೆ ಕೇಳಲು ಅದರಲ್ಲಿ, ನಾನು ಹಾಂ ಸರ್ ಪೈಲ್ ಎಲ್ಲಿ ಇಲ್ಲೆ ಅದೇ ಸರ್. ಆಪಾದಿತ: ಹಾಂ? ನಾನು: ಇಲ್ಲಾ ಅದೇ ಮಿಸ್ಸ ಆಯಿತು ಸರ್ ಈಗಾ ಪೇ ಮಾಡ್ತೀನೀ ಸರ್. ಆಪಾದಿತ ಸಂಬಾಷಣೆ ಎಷ್ಟಿದೆ.. ನಾನು: ಐದಿದೆ ಸರ್. ನೀವು ಎಷ್ಟು ಕೇಳದ್ರೀ ಅಷ್ಟೆ ಅಂತಾ ಇತ್ಯಾದಿಯಾಗಿ ದಾಖಲಾಗಿದ್ದು, ಸದರಿ ಸಂಬಾಷಣೆಯನ್ನು ಪ್ರತ್ಯೇಕವಾಗಿ ಕಛೇರಿಯ ಶ್ರೀಮತಿ ಮಲ್ಲಮ್ಮ ಡಬ್ಲ್ಯುಪಿಸಿ ರವರಿಗೆ ಬರೆಯಲು ತಿಳಿಸಿದರು. ನಂತರ ತಾವು ಸದರಿ ಮೆಮೊರಿ ಕಾರ್ಡನ್ನು ಕೇಸಿನ ಮುಂದಿನ ತನಿಖೆಗಾಗಿ ಒಂದು ಕಾಗದದ ಕವರಿನಲ್ಲಿ ಹಾಕಿ ಅದಕ್ಕೆ ಬಾಯಿ ಅಂಟಿಸಿ "**ಖಓ**"ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಈ ಬಗ್ಗೆ ವಿವರಣೆ ಬರೆದ ಚೀಟಿ ಮೇಲೆ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿ ಆರ್ಟಿಕಲ್ ನಂಬರ-12 ಅಂತಾ ಗುರ್ತಿಸಿರುತ್ತಾರೆ.

ನಂತರ ನನಗೆ ಸಂಬಂದಿಸಿದ ಕಡತದ ಬಗ್ಗೆ ಪರಿಶೀಲನೆ ಮಾಡಲಾಗಿ, 1] ಡಿ.ಸಿ.ಬಿಲ್ ಪುಟ 1 ರಿಂದ 3 ಪುಟಗಳ ಇದರ ಮೇಲೆ ಆಪಾದಿತನ ಕೌಂಟರ ಸಹಿ ಆಗಬೇಕಾಗಿತ್ತು, 2] ಟ್ಯಾಕ್ಷ ಇನವೈಸ್ ಬಿಲ್ಲ ಪುಟ ಮತ್ತು 5 ಇದರ ಮೇಲೆಯೂ ಆಪಾದಿತನ ಕೌಂಟರ ಸಹಿ ಆಗಬೇಕಾಗಿತ್ತು. ಇದಕ್ಕೆ ಸಂಬಂದಿಸಿದಂತೆ ಇವುಗಳಲ್ಲಿ ಒಟ್ಟು 1 ರಿಂದ 9 ಪುಟಗಳು ಡಿ.ಸಿ ಬಿಲ್ಲ ಮತ್ತು ಟ್ಯಾಕ್ಷ ಇನ್ ವೈಸ್ ಬಿಲ್ಲ ಮೇಲೆ ಆಪಾದಿತರ ಕೌಂಟರ ಸಹ ಮಾಡಿಸಿಕೊಂಡು, ಝುರಾಕ್ಸ್ ಮಾಡಿಸಿಕೊಂಡು ದತ್ತಾತ್ರೇಯ ಪಾಟೀಲ, ಸಹಾಯಕ ತೋಟಗಾರಿಕೆ ನಿರ್ದೇಶಕರು ಇವರ ದೃಡೀಕೃತ ಪಡೆದುಕೊಂಡು ತನಿಖಾಧಿಕಾರಿಯವರು ತಮ್ಮ ತಾಬೆಗೆ ತೆಗೆದುಕೊಂಡಿದ್ದು ಇರುತ್ತದೆ.

ಆಗ ಆಪಾದಿತ ಮಲ್ಲಿಕಾರ್ಜುನ ಬಾಬು ಇವರಿಗೆ ತಮ್ಮ ಸಂರಕ್ಷಣಾತ್ಮಕ ಪತ್ರ ಬರೆದುಕೊಡಲ ತಿಳಿಸಿದಂತೆ ಮಲ್ಲಿಕಾರ್ಜುನ ಬಾಬು ಇವರ ಬಲಗೈ ಹೆಬ್ಬೆರಳಿಗೆ ಪೆಟ್ಟಾಗಿದ್ದರಿಂದ ಅವರ ಕಛೇರಿ ಸಿಬ್ಬಂದಿ ಶ್ರ ಪ್ರಕಾಶ ತಂದೆ ಮನೋಹರ ಸಾ:ಓಂ ನಗರ ಕಲಬುರಗಿ ಇವರ ಸಹಾಯದಿಂದ ಗಣಕಯಂತ್ರದಲ್ಲಿ ಟೈ ಮಾಡಿಸಿಕೊಟ್ಟಿದ್ದು, ಮಲ್ಲಿಕಾರ್ಜುನ ಬಾಬು ಇವರು ಸಂರಕ್ಷಣಾತ್ಮಕ ಪತ್ರದಲ್ಲಿ, 11:00 ಗಂಟೆಯ ಸುಮಾರಿ' ಕೆಲಸದಲ್ಲಿ ವ್ಯಸ್ತವಾಗಿದ್ದಾಗ ವಿರುಪಾಕ್ಷ ಗೌಡ ಇವರು ಬಂದು ಕೆಲಸದಲ್ಲಿ ಮಗ್ನನಾಗಿದ್ದ ನನ್ನ ಕೈಯಲ್ಲಿ ಎನ್ನೂ ತುರುಕಿ ಜೇಬಿನಲ್ಲಿಟ್ಟುಕೊಳ್ಳಿ, ಎಂದರು ಎನು ನನಗೆ ಕೊಟ್ಟಿದ್ದಾರೆ ಎಂದು ತಿಳಿದಿರುವುದಿಲ್ಲ. ಇದರಲ್ಲಿ ನಾನ ಯಾವುದೆ ರೀತಿ ದೋಷ ಪೂರಿತವಾಗಿ ನಡೆದುಕೊಂಡಿರುವದಿಲ್ಲ ಎಂದು ಬರೆದುಕೊಟ್ಟಿರುತ್ತಾರೆ. ಈ ಬಗ್ಗೆ ನನಗೆ ಮತ್ತು ನೆರಳು ಸಾಕ್ಷಿ ಸಂತೋಷಕುಮಾರನಿಗೆ ಗೆ ವಿಚಾರಿಸಲು, ನಾವು ಅದನ್ನು ಕಲ್ಲಗಳೆದು ಸದರಿಯವರು 12:15 ಗಂಟೆಗೆ ತನ್ನ ಚೆಂಬರಿನಲ್ಲಿ ಅಂದಿದ ಈ 5,000/-ರೂ ಸಬ್ಸಿಡಿ ಹಣ ಮಂಜೂರಿ ಮಾಡಲು ಲಂಚದ ಬೇಡಿಕೆ ಇಟ್ಟು ಸತಾಯಿಸಿ ನನ್ನಿಂದ ಲಂಚದ ಹಣ ಕೇಳಿ ತನ್ನ ಬಲಗೈಯಿಂದ ತೆಗೆದುಕೊಂಡು ಎಣಿ ತನ್ನ ಪ್ಯಾಂಟಿನ ಹಿಂದಿನ ಜೇಬಿನಲ್ಲಿಟ್ಟುಕೊಂಡಿರುತ್ತಾರೆ. ಅವರು ಟೈಪ ಮಾಡಿಸಿ ಕೊಟ್ಟ ಲಿಖಿತ ಹೇಳಿಕೆ ಸುಳ್ಳಿರುತ್ತದೆಂದು ತಿಳಿಸಿದ್ದು ಇರುತ್ತದೆ.

ನಂತರ ತನಿಖೆಯಲ್ಲಿ ಉಪಯೋಗಿಸಿದ "ಖಒ" ಎಂಬ ಇಂಗ್ಲಿಷ್ ಅಕ್ಷರದ ಸೀಲನ್ನು ಪಂಚ ಸಾಕ್ಷಿ ಹಣಮಂತರಾಯ ಇವರಿಗೆ ನೀಡಿ ತನಿಖಾಧಿಕಾರಿಯಾಗಲೀ ಮಾನ್ಯ ನ್ಯಾಯಾದೀಶರಾಗಲಿ ಹಾಜರ ಪಡಿಸಲು ತಿಳಿಸಿದಾಗ ಹಾಜರು ಪಡಿಸುವಂತೆ ಸೂಕ್ತ ತಿಳುವಳಿಕೆ ಕೊಟ್ಟು ರಸೀದಿ ಪಡೆದುಕೊಂಡರು. ಈ ಹಣ ಜಪ್ತಿ ಪಂಚನಾಮೆ ಕಾಲಕ್ಕೆ ನಡೆದ ಘಟನಾವಳಿಗಳನ್ನು ಗುತ್ತಪ್ಪಗೌಡ ಸಿಪಿಸಿ ರವರು ಪೋಟೋಗ್ರಾಫಿ ಮಾಡಿರುತ್ತಾರೆ. ತನಿಖಾ ಕಾಲದಲ್ಲಿ ಗುರುತಿಸಿದ ಎಲ್ಲಾ ಆರ್ಟಿಕಲ್ಲಗಳನ್ನು ತನಿಖಾಧಿಕಾರಿಯವರು ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ. ಪಂಚನಾಮೆಯನ್ನು ಮೊದಲನೆಯ ಮಹಡಿಯ, ಸಿ-ಬ್ಲಾಕ್, ಸಿ-17 ನ್ನೆದ್ದರಲ್ಲಿರುವ ಆಪಾದಿತ ಸಹಾಯಕ ನಿರ್ದೇಶಕರು, ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ಯಾದಗಿರಿಯಲ್ಲಿ

ಚೆಂಬರಿನಲ್ಲಿ ಕುಳಿತುಕೊಂಡು ದಿನಾಂಕ: 30/09/2020 ರಂದು 12:15 ಗಂಟೆಯಿಂದ 15:30 ಗಂಟೆಯವರೆಗೆ ತನಿಖಾಧಿಕಾರಿಯವರು ಮತ್ತು ಪಂಚರು ಹೇಳಿದಂತೆ ಕನ್ನಡದಲ್ಲಿ ಶ್ರೀ ವಿಜಯಕುಮಾರ ಸಿ.ಹೆಚ್.ಸಿ ರವರು ಲ್ಯಾಪ್ ಟಾಪನಲ್ಲಿ ಟೈಪ ಮಾಡಿರುತ್ತಾರೆ.

ನಂತರ ಪಂಚರಿಗೆ ಪುನಃ ಪ್ರಕರಣದ ಫಿರ್ಯಾದಿಯಾದ ನನ್ನ ಮತ್ತು ಆಪಾದಿತ ಮಲ್ಲಿಕಾರ್ಜುನ ಬಾಬು ತೋಟಗಾರಿಕೆಯ ಉಪ ನಿರ್ದೇಶಕರು, ಯಾದಗರಿ ರವರ ಮಾದರಿ ಧ್ವನಿ ಸಂಗ್ರಹ ಪಂಚನಾಮೆ ಮಾಡಲು ಕೋರಿಕೊಂಡಂತೆ. ಪಂಚರು ಒಪ್ಪಿಕೊಂಡು ಸಹಕರಿಸುವದಾಗಿ ತಿಳಿಸಿರುತ್ತಾರೆ. ಅದರಂತೆ ಮಾದರಿ ಧ್ವನಿ ಸಂಗ್ರಹಣೆ ಕುರಿತು ತನಿಖಾಧಿಕಾರಿಯವರು ಪಂಚರಿಗೆ ತಿಳುವಳಿಕೆ ಕೊಟ್ಟಿರುತ್ತಾರೆ.

ನಂತರ ಈ ಮೊದಲೆ ತಿಳಿಸಿದಂತೆ ತಾವು ಸೋನಿ ವೈಸ್ ರಿಕಾರ್ಡ ಆನ್ ಮಾಡಿ, ತಮ್ಮ ಹೆಸರು ನಾನು ಗುರುಪಾದ ಸಿದ್ದನಗೌಡ ಬಿರಾದಾರ ಪೊಲೀಸ್ ಇನ್ಸಪೆಕ್ಟರ ಯಾದಗಿರಿ ಅಂತಾ ತಿಳಿಸಿ ಪಂಚ ಸಾಕ್ಷಿ ಶ್ರೀ ಸಂತೋಷಕುಮಾರ ತಂದೆ ಶಿವರೆಡ್ಡಿ ಪಾಟೀಲ ವಯ:28 ಉ:ಎಸ್.ಡಿ.ಎ ತಾಲೂಕಾ ಹಿಂದುಳಿದ ವರ್ಗಗಳ ವಿಸ್ತೀರ್ಣಾದಿಕಾರಿಗಳ ಕಛೇರಿ, ಯಾದಗಿರಿ ಸಾ:ಎಂ. ಹೊಸಳ್ಳಿ ತಾ:ಜಿ:ಯಾದಗಿರಿ ಇವರಿಗೆ ಕಛೇರಿಯ ಸೋನಿ ಕಂಪನಿಯ ವೈಸ್ ರಿಕಾರ್ಡರನ್ನು ಮುಂದಿನ ರಿಕಾರ್ಡ ಮಾಡುವ ಕುರಿತು ಕೊಟ್ಟಿದ್ದು ಇರುತ್ತದೆ. ಆಗ ಮೊದಲನೇ ಪಂಚರು ನಾನು ಸಂತೋಷಕುಮಾರ ತಂದೆ ಶಿವರೆಡ್ಡಿ ಪಾಟಿಕಲ ಉ: ಎನ್.ಡಿ.ಎ ಕಾಲೂಆಲಿ ಹಿಂದುಳಿದ ವರ್ಗಗಳ ವಿಸ್ತೀರ್ಣಾಧಿಕಾರಿಗಳ ಕಛೇರಿ, ಯಾದಗಿರಿ ಅಂತಾ ಹೇಳಿ ಇನ್ನೊಬ್ಬ ಪಂಚ ಸಾಕ್ಷಿ, ಶ್ರೀ ಹಣಮಂತರಾಯ ತಂದೆ ರಮೇಶ ಸುತಾರ ವಯ: 31 ಉ: ಎಸ್.ಡಿ.ಎ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಮಿನಿ ವಿಧಾನ ಸೌದ ಯಾದಗಿರಿ, ಸಾ:ನರೋಣಾ ತಾ:ಆಳಂದ ಜಿ:ಕಲಬುರಗಿ, ಇವರ ಮುಂದೆ ವೈಸ ರಿಕಾರ್ಡ ಇಟ್ಟು ಅವರು ನಾನು ಹಣಮಂತರಾಯ ತಂದೆ ರಮೇಶ ಸುತಾರ ಉ: ಎಸ್.ಡಿ.ಎ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಮಿನಿ ವಿಧಾನ ಸೌದ ಯಾದಗಿರಿ ಅಂತಾ ತಿಳಿಸಿದರು ನಂತರ ಹಣಮಂತರಾಯ ಇವರು ಸೋನಿ ವೈಸ್ ರಿಕಾರ್ಡರನ್ನು ನನ್ನ ಮುಂದೆ ಧ್ವನಿ ಮುದ್ರಣ ಮಾಡಿಕೊಳ್ಳಲು ಇಟ್ಟರು. ಆಗ ನಾನು ನನ್ನ ಹೆಸರು ವಿರುಪಾಕ್ಷ ತಂದೆ ಶಿವರಾಜಪ್ಪ ಪೊಲೀಸ್ ಪಾಟೀಲ ಅಂತಾ ತಿಳಿಸಿ ಸ್ಕ್ರಿಪ್ಟ-1 ನ್ನೆದ್ದರ ಈ ಮೊದಲೆ ತಿಳಿಸಿದಂತೆ ಮಾಧರಿ ಧ್ವನಿ ಸಂಗ್ರಹಣಕ್ಕಾಗಿ 3 ಬಾರಿ ಓದಿರುತ್ತೇನೆ.

ನಂತರ ಸೋನಿ ವಾಯ್ಸ್ ರಿಕಾರ್ಡ್ರನಲ್ಲಿ ಧ್ವನಿ ಮುದ್ರಿಸಿದ ಸದರಿ ಧ್ವನಿ ಮುದ್ರಣಗಳನ್ನು ತಮ್ಮ ಠಾಣೆಯ ಸಿಬ್ಬಂದಿ ವಿಜಯಕುಮಾರ ಸಿಹೆಚ್‌ಸಿ ರವರ ಸಹಾಯದಿಂದ ಲ್ಯಾಪ ಟ್ಯಾಪಗೆ ಅಳವಡಿಸಿ

ಡೌನಲೋಡ ಮಾಡಿಕೊಂಡು ಪರಿಶೀಲಿಸಲು, ಸದರಿ ಸ್ತ್ರೀಪ್ಪ-1 ನ್ನೆದ್ದರ ಫಿರ್ಯಾದಿ ವಿರುಪಾಕ್ಷ ಇವರ ಮಾದರಿ ಧ್ವನಿ ಸಂಭಾಷಣೆ ಫೈಲ್ ನಂ:200930-042 ನ್ನೆದ್ದರಲ್ಲಿ ಸೇವ್ ಆಗಿದ್ದು, ಈ ಸ್ವಿಪ್ಪನ್ನು ಒಂದು ಹೊಸ ಸಿ.ಡಿ. ಯಲ್ಲಿ ವರ್ಗಾಯಿಸಿದ್ದು ನಂತರ ಸದರಿ ಸಿ.ಡಿಯನ್ನು, ಪಂಚ ಸಾಕ್ಷಿದಾರರ ಸಮಕ್ಷಮ ಕೇಳಿಸಲು, ಅದು ಪಂಚರು ಪ್ರಾರಂಬಿಸಿದ ವೈಸ ರಿಕಾರ್ಡದಲ್ಲಿ ದಾಖಲಾಗಿದ್ದ ಸಂಭಾಷಣೆ ಇದ್ದು ಫಿರ್ಯಾದಿಗಾಗಿ ತಯ್ಯಾರಿಸಿದ ಸ್ತ್ರೀಪ್ಪ-1 ೨

ಆಗಿರುತ್ತದೆ. ನಂತರ ತನಿಖಾಧಿಕಾರಿಯವರು ಸದರಿ ಸಿ.ಡಿಯ ಮೇಲೆ ತಮ್ಮ ಮತ್ತು ಪಂಚರ ಸಹಿ ಮಾಡಿಸಿದ್ದು ಇರುತ್ತದೆ. ನಂತರ ಸದರಿ ಸಿ.ಡಿಯನ್ನು ಒಂದು ಕಾಗದದ ಕವರಿನಲ್ಲಿ ಹಾಕಿ ಅಂಟಿಸಿ, "ಖಓ" ಇಂಗ್ಲೀಷ್ ಅಕ್ಷರದ ಅರಗಿನಿಂದ ಸೀಲ ಮಾಡಲಾಯಿತು. ಹಾಗೂ ಸದರಿ ಸಿ.ಡಿ.ಕವರಿಗೆ ಅ.ನಂ 1] ಮಾದರಿ ಧ್ವನಿ ಸಂಗ್ರಹಣೆ ಆರ್ಟಿಕಲ್ ನಂ:1 ಎಂದು ಗುರುತಿಸಿ. ವಿವರ ಬರೆದ ಹಾಳೆಯ ಮೇಲೆ ತನಿಖಾಧಿಕಾರಿಯವರು ಮತ್ತು ಪಂಚ ಸಾಕ್ಷಿದಾರರ ಸಹಿ ಪಡೆದು ಸದರಿ ಚೀಟಿಯನ್ನು ಕವರಿಗೆ ಅಂಟಿಸಿ. ಮುಂದಿನ ತನಿಖೆ ಕುರಿತು ತನಿಖಾಧಿಕಾರಿಯವರು ತಮ್ಮ ವಶಕ್ಕೆ ತೆಗೆದುಕೊಂಡಿದ್ದು ಇರುತ್ತದೆ.

షాల లో ఎన్.డి.ఎ కాలని ನಂತರ ಈ ಮೊದಲೆ ತಿಳಿಸಿದಂತೆ ತಾವು ಸೋನಿ ವೈಸ್ ರಿಕಾರ್ಡ ಆನ್ ಮಾಡಿ, ತಮ್ಮ ಹೆಸರು ನಾನು ಗುರುಪಾದ ಸಿದ್ದನಗೌಡ ಬಿರಾದಾರ ಪೊಲೀಸ್ ಇನ್ಸಪೆಕ್ಟರ ಯಾದಗಿರಿ ಅಂತಾ ತಿಳಿಸಿ ಪಂಚ ಸಾಕ್ಷಿ ಶ್ರೀ ಸಂತೋಷಕುಮಾರ ತಂದೆ ಶಿವರೆಡ್ಡಿ ಪಾಟೀಲ ವಯ:೨೮ ಉಎಸ್.ಡಿ.ಎ ತಾಲೂಕಾ ಹಿಂದುಳಿದ ವರ್ಗಗಳ ವಿಸ್ತೀರ್ಣಾಧಿಕಾರಿಗಳ ಕಛೇರಿ, ಯಾದಗಿರಿ ಸಾ:ಎಂ. ಹೊಸಳ್ಳಿ ತಾ:ಜಿ:ಯಾದಗಿರಿ ಇವರಿಗೆ ಕಛೇರಿಯ ಸೋನಿ ಕಂಪನಿಯ ವೈಸ್ ರಿಕಾರ್ಡರನ್ನು ಮುಂದಿನ ರಿಕಾರ್ಡ ಮಾಡುವ ಕುರಿತು ಕೊಟ್ಟಿದ್ದು ಇರುತ್ತದೆ. ಆಗ ಮೊದಲನೇ ಪಂಚರು ನಾನು ಸಂತೋಷಕುಮಾರ ತಂದೆ ಶಿವರೆಡ್ಡಿ ಹಿಂದುಳಿದ ವರ್ಗಗಳ ವಿಸ್ತೀರ್ಣಾಧಿಕಾರಿಗಳ ಕಛೇರಿ, ಯಾದಗಿರಿ ಅಂತಾ ಹೇಳಿ ಇನ್ನೊಬ್ಬ ಪಂಚ ಸಾಕ್ಷಿ. ಶ್ರೀ వణమంకారాయ శండ రమ్యక సుకారా వయ: **31 :** ఎన్.డి.ఎ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಮಿನಿ ವಿಧಾನ ಸೌದ ಯಾದಗಿರಿ. ಸಾ:ನರೋಣಾ ತಾ:ಆಳಂದ ಜಿಕಲಬುರಗಿ, ಇವರ ಮುಂದೆ ವೈಸ ರಿಕಾರ್ಡ ಇಟ್ಟಿದ್ದು. ಅವರು ನಾನು ಹಣಮಂತರಾಯ ತಂದೆ ರಮೇಶ ಸುತಾರ ಉ: ಎಸ್.ಡಿ.ಎ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಮಿನಿ ವಿಧಾನ ಸೌದ ಯಾದಗಿರಿ ಅಂತಾ ತಿಳಿಸಿ ಪಂಚ ಸಾಕ್ಷಿ, ಹಣಮಂತರಾಯ ಇವರು ಸೋನಿ ವೈಸ್ ರಿಕಾರ್ಡರನ್ನು ಪ್ರಕರಣದ ಆಪಾದಿತನಾದ ಮಲ್ಲಿಕಾರ್ಜುನ ಬಾಬು ತಂದೆ ಮೈಲಾರಪ್ಪ ವಯ:43 ಉ: ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ಯಾದಗಿರಿ ಗ್ರೇಡ್-ಎ ಜಾತಿ:ಎಸ್.ಸಿ(ಮಾದಿಗ) ಸಾ:ಬೂದಿಬೆಟ್ಟ ಗ್ರಾಮ ತಾ:ಪಾವಗಡ ಜಿ:ತುಮಕೂರು ಹಾ.ವ

ಶ್ರೀನಾಥ ಜೈನ ಇವರ ಮನೆಯಲ್ಲಿ ಬಾಡಿಗೆ ಆರ್.ವಿ. ಶಾಲೆ ಹತ್ತಿರ ಲಕ್ಷ್ಮಿ ನಗರ ಯಾದಗಿರಿ ರವರ ಮುಂದೆ ದ್ವನಿ ಮುದ್ರಣ ಮಾಡಿಕೊಳ್ಳಲು ಇಟ್ಟಿದ್ದು ಇರುತ್ತದೆ. ಆಗ ಆಪಾದಿತ ತನ್ನ ಹೆಸರು ನಾನು ಮಲ್ಲಿಕಾರ್ಜುನ ಬಾಬು ತಂದೆ ಮೈಲಾರಪ್ಪ ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಅಂತಾ ತಿಳಿಸಿ ಸ್ಕ್ರೀಪ್ಟ-2 ನ್ನೆದ್ದರಂತೆ ಈ ಮೊದಲೆ ತಿಳಿಸಿದಂತೆ ಮಾಧರಿ ದ್ವನಿ ಸಂಗ್ರಹಣಕ್ಕಾಗಿ 3 ಬಾರಿ ಓದಿರುತ್ತಾರೆ.

ನಂತರ ಸೋನಿ ವಾಯ್ಸ್ ರಿಕಾರ್ಡ್ರನಲ್ಲಿ ಧ್ವನಿ ಮುದ್ರಿಸಿದ ಸದರಿ ಧ್ವನಿ ಮುದ್ರಣಗಳನ್ನು ತಮ್ಮ ಠಾಣೆಯ ಸಿಬ್ಬಂದಿ ವಿಜಯಕುಮಾರ ಸಿಹೆಚ್‌ಸಿ ರವರ ಸಹಾಯದಿಂದ ಲ್ಯಾಪ ಟ್ಯಾಪಗೆ ಅಳವಡಿಸಿ ಡೌನಲೋಡ ಮಾಡಿಕೊಂಡು ಪರಿಶೀಲೀಸಲು, ಸದರಿ ಸ್ತ್ರೀಪ್ಪ-2 ನ್ನೆದ್ದರ ಆಪಾದಿತ ಮಲ್ಲಿಕಾರ್ಜುನ ಬಾಬು ಇವರ ಮಾದರಿ ಧ್ವನಿ ಸಂಭಾಷಣೆ ಫೈಲ್ ನಂ:200930_0405-01 ನ್ನೆದ್ದರಲ್ಲಿ ಸೇವ್ ಆಗಿದ್ದು, ಈ ಸ್ವೀಪ್ಪನ್ನು ಒಂದು ಹೊಸ ಸಿ.ಡಿ. ಯಲ್ಲಿ ವರ್ಗಾಯಿಸಿದ್ದು ನಂತರ ಸದರಿ ಸಿ.ಡಿಯನ್ನು, ಪಂಚ ಸಾಕ್ಷಿದಾರರ ಸಮಕ್ಷಮ ಕೇಳಿಸಲು, ಅದು ಪಂಚರು ಪ್ರಾರಂಬಿಸಿದ ವೈಸ ರಿಕಾರ್ಡದಲ್ಲಿ ದಾಖಲಾಗಿದ್ದ ಸಂಭಾಷಣೆ ಇದ್ದು ಆರೋಪಿಗಾಗಿ ತಯ್ಯಾರಿಸಿದ ಸ್ಕ್ರಿಪ್ಟ-2 ಆಗಿರುತ್ತದೆ. ನಂತರ ತಾವು ಸದರಿ ಸಿ.ಡಿಯ ಮೇಲೆ ತಮ್ಮ ಮತ್ತು ಪಂಚರ ಸಹಿ ಮಾಡಿಸಿದ್ದು ಇರುತ್ತದೆ. ನಂತರ ಸದರಿ ಸಿ.ಡಿಯನ್ನು ಒಂದು ಕಾಗದದ ಕವರಿನಲ್ಲಿ ಹಾಕಿ ಅಂಟಿಸಿ, "ಖಓ" ಇಂಗ್ಲೀಷ್ ಅಕ್ಷರದ ಅರಗಿನಿಂದ ಸೀಲ ಮಾಡಲಾಯಿತು, ಹಾಗೂ ಸದರಿ ಸಿ.ಡಿ.ಕವರಿಗೆ ಅ.ನಂ 2] ಮಾದರಿ ದನಿ ಸಂಗ್ರಹಣೆ ಆರ್ಟಿಕಲ್ ನಂ:2 ಎಂದು ಗುರುತಿಸಿ, ವಿವರ ಬರೆದ ಹಾಳೆಯ ಮೇಲೆ ಪಂಚ ಸಾಕ್ಷಿದಾರರ ಸಹಿ ಪಡೆದು ತನಿಖಾಧಿಕಾರಿ ಸಹಿ ಮಾಡಿ, ಸದರಿ ಚೀಟಿಯನ್ನು ಕವರಿಗೆ ಅಂಟಿಸಿ, ಮುಂದಿನ ತನಿಖೆ ಕುರಿತು ತಮ್ಮ ವಶಕ್ಕೆ ತೆಗೆದುಕೊಂಡಿದ್ದು ಇರುತ್ತದೆ.

ಸದರಿ ಮಾದರಿ ದ್ವನಿ ಸಂಗ್ರಹಣ ಪಂಚನಾಮೆಯನ್ನು ಆಪಾದಿತನ ಚೆಂಬರಿನಲ್ಲಿ ಕುಳಿತುಕೊಂಡು ದಿನಾಂಕ:30/09/2020 ರಂದು 15:30 ಗಂಟೆಯಿಂದ 16:30 ಗಂಟೆಯವರೆಗೆ ನಿರ್ವಹಿಸಿದ್ದು ಇರುತ್ತದೆ. ಸದರಿ ಅವದಿಯಲ್ಲಿ ಶ್ರೀ ಗುತ್ತಪಗೌಡ ಸಿ.ಪಿ.ಸಿ ರವರು ಪೋಟೋಗ್ರಾಫಿ ಮಾಡಿರುತ್ತಾರೆ. ವಿಜಯಕುಮಾರ ಸಿ.ಹೆಚ್.ಸಿ. ರವರು ಲ್ಯಾಪಟಾಪಿನಲ್ಲಿ ಬೆರಳಚ್ಚು ಮಾಡಿರುತ್ತಾರೆ. ಕಾರಣ ಆಪಾದಿತ ಮಲ್ಲಿಕಾರ್ಜುನ ಬಾಬು ಇವರು ಫಿರ್ಯಾದಿ ವಿರುಪಾಕ್ಷ ಇತನು. ಶ್ರೀ ಶಿವರೆಡ್ಡಿ ತಂದೆ ಮಹಾದೇವಪ್ಪ ಇವರ ಕವಲೂರು ಹೊಲ ಸರ್ವೆ ನಂ: 542/3 ನ್ನೆದ್ದರ 4 ಎಕರೆ ಜಮೀನಿನಲ್ಲಿ, ಶತಾವರ ಬೆಳೆಗಳಿಗಾಗಿ, ಹನಿ ನೀರಾವರಿ ಘಟಕ ಆಳವಡಿಸಿದ್ದು. ಇದಕ್ಕೆ ಸರಕಾರದಿಂದ ಮಂಜೂರಿಯಾಗುವ ಸಬ್ಸಿಡಿ ಹಣ ಮಂಜೂರಿ ಮಾಡಲು ಮಲ್ಲಿಕಾರ್ಜುನ ಬಾಬು ಇವರು, 5,000/- ರೂ ಲಂಚದ ಹಣದ ಬೇಡಿಕೆ ಇಟ್ಟು ದಿನಾಂಕ:30/09/2020 ರಂದು ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಯಾಧಗಿರಿ ಯಲ್ಲಿ 12:15 ಗಂಟೆಯ

ಸುಮಾರಿಗೆ ವಿಧಾನಸೌದ ಬ್ಲಾಕ್ ನಂ-ಸಿ-17. ನ್ಟೆದ್ದರ ತನ್ನ ಚೆಂಬರಿನಲ್ಲಿ ಫಿರ್ಯಾದಿಯಿಂದ **5,000/-** ರೂ ತೆಗೆದುಕೊಂಡಾಗ ಲಂಚದ ಹಣದ ಸಮೇತ ಸಿಕ್ಕಿ ಬಿದ್ದಿರುತ್ತಾನೆಂದು ಹೇಳಿ ಟೈಪ ಮಾಡಿಸಿದ ಹೇಳಿಕೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ವಕೀಲರಿಂದ</u>

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.